ಸಾಕ್ಷಿಯನ್ನು ದಿನಾಂಕಃ 17.04.2018 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ.ಜಿಎನ್‌ಎನ್ ವಕೀಲರಿಂದಃ

ನನಗೆ ಈಗ 55 ವರ್ಷ ವಯಸ್ಸಾಗಿರುತ್ತದೆ ಈ ದಾವೆಯನ್ನು ಸಲ್ಲಿಸುವ ಕಾಲಕ್ಕೆ ನನಗೆ 40 ವರ್ಷ ವಯಸ್ಸಾಗಿರುತ್ತದೆ. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ನನಗೆ ಒಂದು ಹೆಣ್ಣು ಮತ್ತು ಒಂದು ಗಂಡು ಮಗು ಇರುತ್ತದೆ. ಇವರೂ ಸಹ ವಿದ್ಯಾಭ್ಯಾಸ ಮಾಡಿರುವುದಿಲ್ಲ. ಪ್ರತಿವಾದಿಗಳೆಲ್ಲರೂ ನನಗೆ ಗೊತ್ತು. ಮೋಟನಾಯ್ಕ ಮತ್ತು ದೇವಮ್ಮರವರಿಗೆ ಮಕ್ಕಳೇ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೂ ಮತ್ತು ಪ್ರತಿವಾದಿಗಳಿಗೂ ಯಾವುದೇರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿಗಳು ನನ್ನ ತಮ್ಮಂದಿರು ಎಂದು ನುಡಿದಿರುತ್ತಾರೆ. ದೊಡ್ಡನಾಯ್ಕ ಎನ್ನುವವರು ನನ್ನ ತಾತನಾಗಿರುತ್ತಾರೆ. ಇವರು ಈಗ ತೀರಿಕೊಂಡಿರುತ್ತಾರೆ. ಸದರಿ ದೊಡ್ಡನಾಯ್ಕರವರಿಗೆ 4 ಜನ ಮಕ್ಕಳಿರುತ್ತಾರೆ. ಅವರ ಹೆಸರು ಮೋಟನಾಯ್ಕ, ಈರನಾಯ್ಕ, ತಿಮ್ಮಪ್ಪ ಮತ್ತು ದೇವಮ್ಮರವರು ಆಗಿರುತ್ತದೆ. ದೊಡ್ಡನಾಯ್ಕರವರಿಗೆ ಇಬ್ಬರು ಮಾತ್ರ ಮಕ್ಕಳಿದು ಅವರ ಹೆಸರು ದೊಡ್ಡನಾಯ್ಕ ಮತ್ತು ಮೋಟನಾಯ್ಕ ಆಗಿರುತ್ತದೆ ಎಂದರೆ ಸರಿಯಲ್ಲ. ದೊಡ್ಡನಾಯ್ಕರವರಿಗೆ ಮೊದಲನೇ ಪ್ರತಿವಾದಿ ಹೆಂಡತಿ ಆಗಿರುತ್ತಾರೆ. ಅವರಿಗೆ ಮೊದಲನೆಯ ಹೆಂಡತಿ ನನ್ನ ತಾಯಿ ತೀರಿಕೊಂಡ ನಂತರ 1ನೇ ಪ್ರತಿವಾದಿಯನ್ನು ಮದುವೆ ಮಾಡಿಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. 1ನೇ ಪ್ರತಿವಾದಿಗೆ 2 ರಿಂದ 5ನೇ ಪ್ರತಿವಾದಿಗಳು ಮಕ್ಕಳಾಗಿರುತ್ತಾರೆ ಎಂದರೆ ಸರಿ. ದೇವಮ್ಮರವರು ನನ್ನ ತಾಯಿ ಆಗಿರುವುದಿಲ್ಲ. ಅವರಿಗೆ ಮಕ್ಕಳೇ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ಸದರಿ ದೇವಮ್ಮರವರಿಗೆ ಮಕ್ಕಳು ಆಗದೇ ಇದ್ದ ಕಾರಣ ಅವರ ಅಣ್ಣನ ಮಗನಾದ 3ನೇ ಪ್ರತಿವಾದಿಯು ಚಿಕ್ಕ ಹುಡುಗನಾಗಿದ್ದಾಗಲೇ ದತ್ತು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿಯು ದತ್ತು ಹೋದ ನಂತರ ಅವರ ಯೋಗಕ್ಷೇಮ ಮತ್ತು ಆಸ್ತಿಗಳನ್ನು 3ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಃ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಒ.,

ಹೆಚ್ಚುವರಿ ಸಿಜೆ ಮತ್ತು ಜೆ.ಎಂ.ಎಫ್.ಸಿ,
ಹೆಚ್.ಡಿ.ಕೋಟೆ.